# ವಿವೇಕಪ್ರಭ 2024

# 'ರಜತ ಮಹೋತ್ಸವ'ದ ಹಾರ್ದಿಕ ಅಭಿನಂದನೆಗಳು

ಆತ್ಮೀಯರೇ,

ಈ ವರ್ಷ 'ವಿವೇಕಪ್ರಭ' ಪತ್ರಿಕೆಯು ೨೫ನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆಯ ರಜತ ಮಹೋತ್ಸವ ವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ಎಲ್ಲ ಓದುಗರಿಗೂ ನಮ್ಮ ಪತ್ರಿಕಾಬಳಗದ ಹಾರ್ದಿಕ ಅಭಿನಂದನೆಗಳು. ಕ್ರಿ.ಶ.೨೦೦೦ ಇಸವಿಯ ಜನವರಿಯಲ್ಲಿ ಆರಂಭಗೊಂಡ ಈ ಪತ್ರಿಕೆಯು ಇಪ್ಪತ್ತೈದು ವರ್ಷಗಳ ಕಾಲ ನಿರಂತರ ಶ್ರೀರಾಮಕೃಷ್ಣ-ಶ್ರೀಮಾತೆ-ವಿವೇಕಾನಂದ ಹಾಗೂ ವೇದಾಂತ ಸಾಹಿತ್ಯವನ್ನು ಎಲ್ಲ ವೈವಿಧ್ಯಗಳೊಂದಿಗೆ ಜನರಿಗೆ ತಲುಪಿಸುವ ಕಾರ್ಯವನ್ನು ನಿರಂತರ ಮಾಡುತ್ತ ಬಂದಿದೆ. ನಮ್ಮ ಪ್ರಕಾಶನ ವಿಭಾಗದೊಂದಿಗೆ ಈ ಪತ್ರಿಕೆಯೂ ಸೇರಿಕೊಂಡು ಸಾಹಿತ್ಯಸೇವೆಯನ್ನು ಇನ್ನಷ್ಟು ವ್ಯಾಪಕಗೊಳಿಸಲು ಯತ್ನಿಸುತ್ತಿದೆ; ಇದು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಚಟುವಟಿಕೆಗಳಲ್ಲಿ ಅತ್ಯಂತ ಸ್ಫೂರ್ತಿದಾಯಕ ಹಾಗೂ ಸಾರ್ಥಕ ಕಾರ್ಯವಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಈ ಬಾರಿಯ ವಿಶೇಷ ಸಂಚಿಕೆಯ ವಿಷಯ, **'ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯ'** ಎಂದಾಗಿದೆ.

ಹಲವು ಮಂದಿ ಸಂನ್ಯಾಸಿಗಳು ಹಾಗೂ ಹೆಸರಾಂತ ಲೇಖಕರು ಈ ವಿಷಯವನ್ನು ಕುರಿತು ಮಾಹಿತಿ ಪೂರ್ಣವಾದ ಹಾಗೂ ಸ್ಫೂರ್ತಿದಾಯಕವಾದ ಉತ್ತಮ ಲೇಖನಗಳನ್ನು ಬರೆದಿದ್ದಾರೆ. 'ವಿವೇಕಪ್ರಭ' ಓದುಗರಿಗೆ ಈ ಸಂಚಿಕೆ ಆಪ್ಯಾಯಮಾನವಾಗುವುದು ಎಂದು ನಮ್ಮ ನಂಬಿಕೆ.

'ವಿವೇಕಪ್ರಭ' ಪತ್ರಿಕೆಯ ಮೂಲಕ ರಾಮಕೃಷ್ಣ-ವಿವೇಕಾನಂದರ ಭಾವಧಾರೆ ಹಾಗೂ ವೇದಾಂತವನ್ನು ನಾಡಿನ ಜನತೆಗೆ ಬಿತ್ತರಿಸುವಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಆಶ್ರಮಗಳಿಗೆ, ಸಂಸ್ಥೆಗಳಿಗೆ, ಸ್ವಯಂಸೇವಕರಿಗೆ, ಬಂಧುಮಿತ್ರರಿಗೆ, ಸಿಬ್ಬಂದಿ ವರ್ಗದವರಿಗೆ, ಜಾಹೀರಾತುದಾರರಿಗೆ, ಅಚ್ಚುಕಟ್ಟಾಗಿ ಮುದ್ರಿಸುತ್ತಿರುವ ಮುದ್ರಕರಿಗೆ, ಹಾಗೂ ಸಹಕಾರ ನೀಡುತ್ತಿರುವ ಸರಕಾರಿ ಇಲಾಖೆಗಳಿಗೆ ಮತ್ತು ಅಂಚೆ ಕಛೇರಿಯವರಿಗೆ ಪ್ರೀತಿಯ ಧನ್ಯವಾದಗಳು. ಈ ಪತ್ರಿಕೆಯನ್ನು ಇನ್ನಷ್ಟು ವ್ಯಾಪಕವಾಗಿ ಓದುಗರ ಬಳಿಗೆ ತಲುಪಿಸುವಲ್ಲಿ ತಮ್ಮೆಲ್ಲರ ಸಹಕಾರ ಎಂದೆಂದೂ ಇರಲಿ ಎಂದು ಆಶಿಸುತ್ತೇವೆ.

ಜೈ ಶ್ರೀರಾಮಕೃಷ್ಣ!

ಭಗವತ್ಸೇವೆಯಲ್ಲಿ ತಮ್ಮ
ಸ್ವಾಮಿ ಮುಕ್ತಿದಾನಂದ
ವ್ಯವಸ್ಥಾಪಕ ಸಂಪಾದಕರು